## ಬೆಂಗಳೂರು ರಾಮಕೃಷ್ಣ ಮಠದ ಶತಮಾನೋತ್ಸವ

ಬೆಂಗಳೂರು ರಾಮಕೃಷ್ಣಮಠದ ಶತಾಬ್ದದ ಪ್ರಾರಂಭೋತ್ಸವವನ್ನು ೨೦೦೪, ಆಗಸ್ಟ್ ೨೨ರಂದು ಆಚರಿಸಲಾಯಿತು. ಮುಂಜಾನೆ ೫ ಗಂಟೆಗೆ ಉಷಾಕೀರ್ತನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ಬಳಿಕ ವಿಶೇಷ ಪೂಜೆ, ವೇದಘೋಷ, ಸ್ತೋತ್ರ ಪಠನ, ಹೋಮ, ಭಜನೆ ಮುಂತಾದ ವಿವಿಧ ಧಾರ್ಮಿಕ ಕ್ರಿಯೆಗಳು ಸೇರಿದಂತೆ ಮಧ್ಯಾಹ್ನ ೧೨.೩೦ರವರೆಗೆ ಮುಂದುವರಿಯಿತು. ಸಂಜೆ ೫ ಗಂಟೆಗೆ ರಾಮಕೃಷ್ಣ ಸಭಾಂಗಣದಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರು ಮುಖ್ಯ ಅತಿಥಿಗಳಾಗಿದ್ದರು ಮತ್ತು ಪರಮ ಪೂಜ್ಯ ಸುರೇಶಾನಂದಜಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಠದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿಯವರು ಎಲ್ಲರನ್ನೂ ಸ್ವಾಗತಿಸಿದರು. ಡಾ.ಎಂ. ಎಸ್. ನಂಜುಂಡಯ್ಯನವರು ಬೆಂಗಳೂರು ರಾಮಕೃಷ್ಣ ಮಠದ ಇತಿಹಾಸವನ್ನು ವಿವರಿಸಿದರು. ಅನಂತರ ಮುಖ್ಯ ಅತಿಥಿಗಳು ಮಾತನಾಡಿ ತಾವು ಬೆಂಗಳೂರು ಮಠದಲ್ಲಿ ಕಳೆದ ಮಧುರ ಕ್ಷಣಗಳನ್ನು ನೆನೆಸಿಕೊಂಡರು. ಮೈಸೂರು (ಕರ್ನಾಟಕ) ವಿವೇಕಾನಂದರ ಭರವಸೆಯ ನೆಲವಾಗಿತ್ತು, ಕನ್ನಡದ ಜನ ಇದನ್ನು ಹುಸಿಯಾಗಿಸಲಿಲ್ಲ ಎಂದು ಶ್ಲಾಘಿಸಿದರು. ಶ್ರೀಮಾತೆ ಶಾರದಾ ದೇವಿ, ಶ್ರೀರಾಮಕೃಷ್ಣರ ಅನೇಕ ಸಂನ್ಯಾಸೀ ಶಿಷ್ಯರು ಈ ಸ್ಥಳಕ್ಕೆ ಭೇಟಿ ನೀಡಿ ಪವಿತ್ರಗೊಳಿಸಿರುವ ವಿಷಯವನ್ನು ಅವರು ಸ್ಮರಿಸಿಕೊಂಡರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ಸುರೇಶಾನಂದಜೀಯವರು, ಶತಮಾನೋತ್ಸವ ಆಚರಿಸುತ್ತಿರುವ ರಾಮಕೃಷ್ಣ ಮಹಾಸಂಘದ ನಾಲ್ಕನೇ ಕೇಂದ್ರ ಇದು ಎಂದು ಶ್ಲಾಘಿಸಿದರು. ಸ್ವಾಮಿ ಯತೀಶ್ವರಾನಂದಜಿ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಮಠ ಸಾಧಿಸಿದ ಮಹತ್ವದ ಪ್ರಗತಿಯನ್ನು ಅವರು ಭಾವಪೂರ್ಣವಾಗಿ ಸ್ಮರಿಸಿದರು. ಮಠದ ಪ್ರಗತಿಗೆ ಅಪೂರ್ವ ಕೊಡುಗೆಯನ್ನು ನೀಡಿದ ಅನೇಕ ಹಿರಿಯ ಭಕ್ತರನ್ನು ಅವರು ಹೃತ್ಪೂರ್ವಕವಾಗಿ ಪ್ರಶಂಸಿಸಿದರು.

೩೦೦೦ಕ್ಕೂ ಅಧಿಕ ಭಕ್ತರು ಇಡೀ ದಿನದ ಕಾರ್ಯಕ್ರಮಗಳಲ್ಲಿ ಭಕ್ತಿಪೂರ್ವಕವಾಗಿ ಭಾಗವಹಿಸಿ ಅಪೂರ್ವ ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸಿದರು.

ವಿ|ಪ್ರ

## ದೇವಘರ್‌ನಲ್ಲಿ ಶಾರದಾದರ್ಶನ ಮತ್ತು ಕ್ರೀಡಾ ಸಂಕೀರ್ಣದ ಉದ್ಘಾಟನೆ

ದೇವಘರ್‌ನಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾಪೀಠದಲ್ಲಿ 'ಶಾರದಾದರ್ಶನ' ಎಂಬ ಶ್ರೀಮಾತೆಯವರ ಜೀವನ ಸಂದೇಶಕ್ಕೆ ಸಂಬಂಧಿಸಿದ ಶಾಶ್ವತ ಚಿತ್ರಪ್ರದರ್ಶನವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿಯವರು ಅದರ ಉದ್ಘಾಟನೆಯನ್ನು ಸೆಪ್ಟೆಂಬರ್ ೧೮ರಂದು ನೆರವೇರಿಸಿದರು. ಸೆಪ್ಟೆಂಬರ್ ೧೯ರಂದು ಪೂಜ್ಯ ಸ್ವಾಮೀಜಿಯವರು ಅಲ್ಲಿಯೇ ವಿವೇಕಾನಂದ ಕ್ರೀಡಾಸಂಕೀರ್ಣವನ್ನೂ ಉದ್ಘಾಟಿಸಿದರು. ಕೊಲ್ಕತಾ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎ.ಕೆ. ಗಂಗುಲಿ ಅವರು ಎರಡೂ ಸಭೆಗಳ ಮುಖ್ಯ ಅತಿಥಿಗಳಾಗಿದ್ದರು.

ವಿ|ಪ್ರ

## ನವೀಕೃತ ವಿವೇಕಾನಂದ ಜನ್ಮಗೃಹದ ಉದ್ಘಾಟನೆ

ಸ್ವಾಮಿ ವಿವೇಕಾನಂದರು ಜನಿಸಿದ, ಅವರ ವಂಶಕ್ಕೆ ಸೇರಿದ ಮನೆಯನ್ನು ರಾಮಕೃಷ್ಣ ಮಹಾಸಂಘವು ವಶಪಡಿಸಿಕೊಂಡು, ಅದನ್ನು ನವೀಕರಿಸಿ ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾರ್ಪಡಿಸಿದೆ. ಈಗ ಅದು ವಿವೇಕಾನಂದ ಅಧ್ಯಯನ ಕೇಂದ್ರ, ಪುಸ್ತಕಭಂಡಾರ ಮುಂತಾದ ವಿಭಾಗಗಳನ್ನು ಒಳಗೊಂಡಿದ್ದು ರಾಮಕೃಷ್ಣ ಮಹಾಸಂಘದ ಒಂದು ಪ್ರಧಾನ ಕೇಂದ್ರವಾಗಿ ತಲೆ ಎತ್ತಿದೆ. ಅದರ ಉದ್ಘಾಟನೆಯನ್ನು ಸಂಘದ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಸೆಪ್ಟೆಂಬರ್ ೨೬ರಂದು ನೆರವೇರಿಸಿದರು. ಮಂಗಳಾರತಿ, ವೇದಘೋಷ, ಭಜನೆ ಮತ್ತು ವಿಶೇಷ ಪೂಜೆಗಳೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಮುಂದೆ ದ್ರುಪದ್ ಸಂಗೀತ ಕಾರ್ಯಕ್ರಮದ ನಂತರ ಧಾರ್ಮಿಕ ಪ್ರವಚನಗಳು ನಡೆದವು. ಸಂಜೆ ೭ ಗಂಟೆಗೆ ಶ್ರೀ ಶೇಖರ್ ಸೇನ್ ಅವರು ವಿವೇಕಾನಂದರನ್ನು ಕುರಿತಾದ ಸಂಗೀತ ಏಕಪಾತ್ರಾಭಿನಯವನ್ನು ನಡೆಸಿಕೊಟ್ಟರು.

ವಿ|ಪ್ರ

## ಯೋಗಿ ನರಸಿಂಹ ದೇವಾಲಯದಲ್ಲಿ ಆಧ್ಯಾತ್ಮಿಕ ಶಿಬಿರ

ಬೆಂಗಳೂರಿನ ಅಲಸೂರು ರಾಮಕೃಷ್ಣ ಮಠದವರು ಚನ್ನಪಟ್ಟಣ ತಾಲ್ಲೂಕಿನಲ್ಲಿ ಸುಂದರ ಬೆಟ್ಟದ ಮೇಲಿರುವ ಯೋಗಿ ನರಸಿಂಹ ದೇವಾಲಯದಲ್ಲಿ ಭಕ್ತರಿಗಾಗಿ ಒಂದು ದಿನದ ಆಧ್ಯಾತ್ಮಿಕ ಶಿಬಿರವನ್ನು ಆಗಸ್ಟ್ ೧೫ರಂದು ಏರ್ಪಡಿಸಿದ್ದರು. ಸುಮಾರು ೩೫೦ ಭಕ್ತರು ಅದರಲ್ಲಿ ಭಾಗವಹಿಸಿದ್ದರು. ಬೆಂಗಳೂರಿನಿಂದ ಭಕ್ತರು ಅಲ್ಲಿಗೆ ಬರುವುದಕ್ಕೆ ಮಠದವರು ಬಸ್ ವ್ಯವಸ್ಥೆ ಮಾಡಿದ್ದರು. ಬೆಳಿಗ್ಗೆ ೯.೦೦ ಗಂಟೆಯಿಂದ ಸಂಜೆ ೪.೦೦ ಗಂಟೆಯವರೆಗೆ ಭಜನೆ, ಉಪನ್ಯಾಸಗಳು, ನಿರ್ದೇಶಿತ ಧ್ಯಾನ, ಅಷ್ಟೋತ್ತರ ಅರ್ಚನೆ, ಆರತಿ ಮುಂತಾದ ಕಾರ್ಯಕ್ರಮಗಳಿದ್ದವು. ಒಳ್ಳೆಯ ಊಟ, ತಿಂಡಿಯ ವ್ಯವಸ್ಥೆಗಳಿದ್ದವು. ಸುಂದರ ಪ್ರಾಕೃತಿಕ ಪರಿಸರದೊಡನೆ ಆಧ್ಯಾತ್ಮಿಕ ವಾತಾವರಣವೂ ಸೇರಿಕೊಂಡು ಭಕ್ತರೆಲ್ಲರೂ ಅಪೂರ್ವ ಆನಂದವನ್ನು ಅನುಭವಿಸಿದಂತಾಯಿತು.

ವಿ|ಪ್ರ